◆ **ಜೀವನಾನುಭವದಿಂದ, ಸಾಹಿತ್ಯದ ಸತತ ಅನುಸಂಧಾನದಿಂದ ಪಕ್ವಗೊಂಡ ಮನಸ್ಸು ನಿಮ್ಮದು. ಬರವಣಿಗೆಯ ಆರ್ದ್ರತೆಯನ್ನು ಎಂದಿಗೂ ಕಾಪಿಟ್ಟುಕೊಂಡು ಬಂದಿರುವವರು ನೀವು. ನಿಮ್ಮೊಂದಿಗಿನ ಸಂವಾದ ಎಂದರೆ ಕಳೆದುಹೋದ ಒಂದಿಡೀ ಕಾಲಖಂಡದ ಒಡಲಾಳದ ನುಡಿಗಳನ್ನು ಕೇಳಿಸಿಕೊಳ್ಳುವುದು. ಮತ್ತು ಆ ಬೆಳಕಿನಿಂದ ನಮ್ಮ ವರ್ತಮಾನವನ್ನು ಮರುಚಿಂತನೆಗೆ ತೊಡಗಿಸಿಕೊಳ್ಳುವುದೂ ಆಗಿದೆ. ಅದು ನಮಗೆ ಸಂತಸವೂ ಹೌದು. ಮಾರ್ಗದರ್ಶಕವೂ ಹೌದು.**

ನನ್ನ ಬಗ್ಗೆ ಅಭಿಮಾನದಿಂದ ಈ ಮಾತು ಆಡಿದ್ದೀರಿ. ಅದಕ್ಕಾಗಿ ವಂದನೆಗಳು. ಪ್ರಶಂಸೆಯ ಈ ಪದಗಳು ಮಾತ್ರ ನನಗೆ ಬೇಡ. ಪ್ರತಿಯೊಬ್ಬರಿಗೂ ಅವರವರ ಜೀವನ ಒಂದೊಂದು ರೀತಿಯ ಅನುಭವ ನೀಡಿರುತ್ತದೆ; ತಮ್ಮ ಪ್ರತಿಭೆ, ಶಕ್ತಿ, ಪ್ರಯತ್ನ, ಸಂಘರ್ಷದ ಮೂಲಕ ಸಾಧ್ಯವಿದ್ದ ರೀತಿಯಲ್ಲಿ ಅವರು ಅದನ್ನು ರೂಪಿಸಿಕೊಂಡಿರತಾರೆ, ಅಷ್ಟೆ. ಇನ್ನು, ಸಾಹಿತ್ಯದ 'ಸತತ' ಅನುಸಂಧಾನ ಅಂದಿರಿ. ನಾನು 'ಅಂಥ' ಅನುಸಂಧಾನ ಮಾಡಿದವನಲ್ಲ. ಹೀಗಾಗಿ ನನ್ನ ಮನಸ್ಸು ಪಕ್ವಗೊಂಡಿದೆ ಎಂದು ಹೇಳಲಾರೆ. ಆದರೆ ಬರವಣಿಗೆಯ ಆರ್ದ್ರತೆಯನ್ನು ಮಾತ್ರ ಮೊದಲಿನಿಂದ ಉಳಿಸಿಕೊಂಡಿದ್ದೇನೆ. ಹಾಗೆ ನೋಡಿದರೆ, ನನ್ನನ್ನು ಇಷ್ಟು ಕಾಲ ಕಾಪಾಡಿದ್ದು, ಬದುಕಿಸಿದ್ದು ನನ್ನ ಬರವಣಿಗೆಯೇ. ಅದು, ಅದರ ಗುಣಮಟ್ಟ ಎಂಥದ್ದೇ ಇರಲಿ, ಒಟ್ಟು, ಒಂದು ಮಿತಿಯಲ್ಲಿ ಓದುವಿಕೆಯನ್ನು ಆಧರಿಸಿದ್ದೇನೆ, ಬರವಣಿಗೆಯನ್ನು ಆರಾಧಿಸಿದ್ದೇನೆ. ನನಗೆ ಅರಿವಿಲ್ಲದೇನೇ 1956ರಿಂದ ಈ ವರೆಗೂ ನಿರುದ್ದೇಶವಾಗಿ ದಿನಚರಿ ಬರೆಯುತ್ತ ಬಂದಿದ್ದೇನೆ. ಈ ಪಯಣದಲ್ಲಿ ಸಾಗಿ ಬರುವಾಗಿನ ನನ್ನವಾದ ಅನುಭವ ಮತ್ತು ನೆನಪುಗಳ ಖಜಾನೆ ಮಾತ್ರ ನನ್ನಲ್ಲಿದೆ. ಲಿಖಿತ ದಿನಚರಿಗಳು ಇರುತ್ತವೆ. ನನ್ನಲ್ಲಿ ಹುದುಗಿರುವ ಅನುಭವ, ನೆನಪುಗಳನ್ನು ಮಾತ್ರ ನಾನು ಇರುವಷ್ಟು ಕಾಲ ಯಾರಾದರೂ, ಬೇಕಾದಷ್ಟು ಬಳಸಿಕೊಳ್ಳಬಹುದು.

◆ **ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಅಚ್ಚಳಿಯದ ಹೆಜ್ಜೆಗಳನ್ನೂರಿದವರು ನೀವು. ಹಾಗೆಯೇ ಆ ಹೆಜ್ಜೆಗುರುತುಗಳಲ್ಲಿ ಧಾರವಾಡದ – ಬಯಲುಸೀಮೆತನಗಳ ಛಾಪಿದೆ. ನಿಮ್ಮ ಬದುಕನ್ನು ವ್ಯಕ್ತಿತ್ವವನ್ನು ಪೋಷಿಸಿದ–ರೂಪಿಸಿದ 'ಅಂದಿನ ಧಾರವಾಡ'ವನ್ನು ಈಗ, ಈ ದೂರದಲ್ಲಿ ನಿಂತು ಹೇಗೆ ಕಾಣ್ತೀರಿ?**

ನಮ್ಮಲ್ಲಿ ಸಾಹಿತ್ಯ ಚರಿತ್ರೆ ಬರೆಯುವವರ, ಬರೆಸುವವರ, ಬರೆಸಿಕೊಳ್ಳುವವರ, ಪ್ರಕಟಿಸುವವರ, ಪ್ರಚಾರಕರ, ಸಂಘಟಕರ, ಅಧಿಕಾರದಲ್ಲಿರುವವರ ಆಣತಿಯಂತೆ ನಡೆದುಬಂದದ್ದು ಚರಿತ್ರೆ. ಬಹುಶಃ ಇತರ ಭಾಷೆಗಳ ಸ್ಥಿತಿಯೂ ಹೀಗೇ ಇದ್ದಿರಬಹುದು. ಆದರೂ ನಿಮ್ಮ ಸಾಹಿತ್ಯಚರಿತ್ರೆಯಲ್ಲಿ ನನ್ನ ಹೆಜ್ಜೆಗಳನ್ನು ಗುರುತಿಸಿದ್ದೀರಿ. ಖುಶಿಯಾಯಿತು.

ನಮ್ಮ ಬರವಣಿಗೆ ನಮ್ಮ ವ್ಯಕ್ತಿತ್ವದ ಮುದ್ರೆ ಆಗಿರಬೇಕು. ಅದರಲ್ಲಿ ನಮ್ಮತನದ ಛಾಯೆಯನ್ನು ನಾವು ಮೂಡಿಸಿರಬೇಕು, ಅದನ್ನು ಓದುಗರು, ವಿಮರ್ಶಕರು ಗುರುತಿಸುವಂತಾಗಬೇಕು. ನಾವು ಬಳಸುವ ಪದ, ಭಾಷೆ, ನೀಡುವ ಆಸಕ್ತಿಯ ವಿವರ, ಪ್ರಾಮಾಣಿಕತೆ ಮುಂತಾದವುಗಳ ಮೂಲಕ, ನೀವು ಹೇಳಿದ 'ಛಾಪು' ಅನ್ನುವುದು ಹೊಮ್ಮಬೇಕು. ನನ್ನ ಕವಿತೆ, ಕತೆ, ಲಲಿತಪ್ರಬಂಧ, ವಿಮರ್ಶಾಲೇಖನ, ಆತ್ಮಕಥೆ, ಸಂಪಾದಕೀಯ ಬರಹಗಳಲ್ಲಿ ಇಂಥ ಛಾಪನ್ನು ನೀವು ಕಂಡಿದ್ದೀರಿ. ಅದು ಸತ್ಯ. ಈಗ ಆಗದಿದ್ದರೂ, ಮುಂದೆ ಎಂದಾದರೂ ಯಾರಾದರೂ ಅದನ್ನು ಗುರುತಿಸುತ್ತಾರೆ.

ಧಾರವಾಡ, ಅದರ ಆಚೆ ಈಚೆ ಇರುವ ಯಾದವಾಡ ಮತ್ತು ಮನಗುಂಡಿ ಎಂಬ ಎರಡು ಹಳ್ಳಿಗಳು ನನ್ನ ಸಮಸ್ತ ಅನುಭವ ಭಂಡಾರ ಮತ್ತು ಸಂಸ್ಕಾರಗಳನ್ನು ರೂಪಿಸಿದ ಶಕ್ತಿಸ್ಥಲಗಳು.